# ಆರಾಧ್ಯದೈವ ಬಾಳಿ ಬದುಕಿದ ನೆಲಕ್ಕೆ ತೀರ್ಥಯಾತ್ರೆ - ೨

◆ ಕುವೆಂಪು

| ಹಿಂದಿನ ಸಂಚಿಕೆಯಿಂದ ಮುಂದುವರೆದುದು

೯-೧೦-೧೯೨೯: ಬುಧವಾರ

ಮೂರು ಗಂಟೆಯ ಹೊತ್ತಿಗೆ ಹೋಗಿ ಮಹಾಪುರುಷ ಮಹಾರಾಜರನ್ನು ನೋಡಿದೆವು. ನಾವು ನಿನ್ನೆ ದಕ್ಷಿಣೇಶ್ವರಕ್ಕೆ ಹೋಗಿ ಬಂದ ಸಂಗತಿಯನ್ನು ಕೇಳಿ "How did you like it?" ಎಂದು ಕೇಳಿದರು. ಅವರನ್ನು ನೋಡಿದಾಗಲೆಲ್ಲಾ ಶಿವಾನಂದರು ಶ್ರೀರಾಮಕೃಷ್ಣರಲ್ಲಿ ಮಗ್ನರಾದಂತೆ ತೋರುತ್ತದೆ.

ಮೂರೂವರೆ ಗಂಟೆಯ ಹೊತ್ತಿಗೆ ಸ್ಟೀಮರ್ ಘಟ್ಟಕ್ಕೆ ಬಂದು ಸ್ಟೀಮರ್ ಹತ್ತಿ ಉದ್ಬೋಧನ ಆಫೀಸಿಗೆ ಹೊರಟುಬಂದೆವು. ನಮ್ಮ ಗಂಗಾಯಾನ ರಮಣೀಯವಾಗಿತ್ತು. ಉದ್ಬೋಧನ ಆಫೀಸಿನಲ್ಲಿ ಶಾರದಾನಂದ ಸ್ವಾಮಿಗಳ ಮತ್ತು ಮಹಾಮಾತೆಯವರ ಕೋಣೆಗಳನ್ನು ಸಂದರ್ಶಿಸಿದೆವು. ಖೋಕಾ ಮಹಾರಾಜ್ (ಸ್ವಾಮಿ ಸುಬೋಧಾನಂದರು) ಹಾಸಿಗೆ ಹಿಡಿದು ಕ್ಷೀಣದೇಹರಾಗಿ ಮಲಗಿದ್ದರು. ಅವರಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದೆವು. ತರುವಾಯ ಪ್ರಸಾದ ಸ್ವೀಕಾರವೂ ಆಯಿತು (ಅಂದರೆ ಭೋಜನ ಆಯಿತು ಎಂದರ್ಥ!). ಟೀ ಸಿಕ್ಕಿತು. ಪ್ರಸಾದ್ ಮಹಾರಾಜ್, ಶ್ರೀಧರ ಮಹಾರಾಜ್ ಇವರನ್ನು ಕಂಡೆವು. ಅಲ್ಲಿಂದ 'ಶ್ರೀರಾಮಕೃಷ್ಣ ಕಥಾಮೃತ'ದ ಸುಪ್ರಸಿದ್ಧ ಗ್ರಂಥಕರ್ತರಾದ ಮಾಸ್ಟರ್ ಮಹಾಶಯರ ಮನೆಯನ್ನು ಹುಡುಕಿಕೊಂಡು ಹೊರಟೆವು. ಕಲ್ಕತ್ತಾ ಬೀದಿಗಳ ಗಲಭೆ ಸಾಕಾಗಿಹೋಯಿತು ನನಗೆ. ಅಂತೂ ಕಡೆಗೆ ದೊಡ್ಡ ಮಹಡಿಯೊಂದನ್ನು ಹತ್ತಿ ಕವಿದಿದ್ದ ಕತ್ತಲೆಯಲ್ಲಿಯೆ ಹೋದೆವು.

ಮಾಸ್ಟರ್ ಮಹಾಶಯರು ಬೋಳು ಮಹಡಿಯಲ್ಲಿ (ಅನೇಕ ಅಂತಸ್ತಿನ ಕಟ್ಟಡದ ಕೊನೆಯ ಅಂತಸ್ತಿನ ತಾರಸಿಯ ಮೇಲೆ) ಕುರ್ಚಿ ಮೇಲೆ ಕುಳಿತು ಧ್ಯಾನಾಸಕ್ತರಾಗಿದ್ದರು. ನಾವು ನಮಸ್ಕಾರ ಮಾಡಿದೆವು. ಸ್ವಲ್ಪ ಹೊತ್ತಾದ ಮೇಲೆ ನಮ್ಮೊಡನೆ ಸ್ನೇಹಪೂರ್ಣ ವಾತ್ಸಲ್ಯಭಾವದಿಂದ ಮಾತಾಡತೊಡಗಿದರು. ನವಯುಗಾವತಾರ ಲೀಲೆಯನ್ನು ಜಗತ್ತಿಗೆ ತಿಳಿಸಿದವರಲ್ಲಿ ಮೊತ್ತಮೊದಲಿಗರು ಅವರೇ. ನೀಳವಾದ ಗಡ್ಡದಿಂದಲೂ ಬಿಳಿದಾದ ಕೂದಲಿನಿಂದಲೂ ಗಾಂಭೀರ್ಯದ ಮೂರ್ತಿಯಾಗಿರುವರವರು. ಅಷ್ಟೇನೂ ಆಡಂಬರದ ಮನುಷ್ಯನಲ್ಲ. ಬಹಳ ಸಾಧಾರಣ ವಸ್ತ್ರಗಳನ್ನು ಧರಿಸಿದ್ದರು. ನನ್ನನ್ನು ಕವಿ ಎಂದು ಸಿದ್ಧೇಶ್ವರಾನಂದರು ಪರಿಚಯ ಮಾಡಿಕೊಟ್ಟ ಮೇಲೆ ನಾನು ಬರೆದ 'ಶ್ರೀರಾಮಕೃಷ್ಣ ಪರಮಹಂಸ' ಎಂಬ ಕವನವನ್ನು ಹಾಡಲು ಹೇಳಿದರು. ನಾನು ಹಾಡಿದೆ. ಅವರು ಬಹಳ ಸಂತೋಷಪಟ್ಟು, ಅದರ ಪಂಕ್ತಿಪಂಕ್ತಿಯಾದ ಭಾಷಾಂತರವನ್ನು ಬಂಗಾಳಿಯಲ್ಲಿ ಬರೆದು ಕಳುಹಿಸಬೇಕೆಂದು ಸ್ವಾಮಿಜಿಯೊಡನೆ ಹೇಳಿದರು. ನಮ್ಮನ್ನು ತಮ್ಮ ಕೊಠಡಿಯ ಒಳಕ್ಕೆ ಕರೆದೊಯ್ದು ಅಲ್ಲಿದ್ದ ಪಟಗಳನ್ನು ತೋರಿಸಿದರು. ಶ್ರೀಗುರುದೇವನ ಯೋಗಿಯ ದೃಷ್ಟಿಯು ಮೊಟ್ಟೆಯ ಮೇಲೆ ಕಾವು ಕುಳಿತ ಹಕ್ಕಿಯ ದೃಷ್ಟಿಯಂತೆ ಅಂತರ್ಮುಖವಾಗಿರುವುದನ್ನು ಚಿತ್ರವಾಗಿ ಬರೆಯಿಸಿದ್ದ ಪಟವನ್ನೂ ನೋಡಿದೆವು. ಶಿವನ ತಾಂಡವ ನೃತ್ಯ, ಗುರುಮಹಾರಾಜರು, ಮಹಾಮಾತೆ ಮೊದಲಾದವರ ಚಿತ್ರಗಳೂ ಇದ್ದುವು. ಕೋಣೆ ಸ್ವಲ್ಪ ಕೊಳಕಾಗಿಯೂ ನಿಯಮವಿಹೀನವಾಗಿ ಹರಡಲ್ಪಟ್ಟ ವಸ್ತುಗಳಿಂದಲೂ ತುಂಬಿ 'ಅಶಿಸ್ತಿನ ಅವತಾರ'ದಂತಿತ್ತು!



ಮಾಸ್ಟರ್ ಮಹಾಶಯ

ತರುವಾಯ ಸಂಭಾಷಣೆ ಆರಂಭವಾಯಿತು. ಹಕ್ಸ್ಲೆ ವಿಷಯ ಹೇಳಿ, "ವಿಜ್ಞಾನಶಾಸ್ತ್ರದ ದೃಷ್ಟಿಯೆ ಬೇರೆ, ಅಧ್ಯಾತ್ಮಶಾಸ್ತ್ರದ ದೃಷ್ಟಿಯೆ ಬೇರೆ" ಎಂಬುದನ್ನು ವಿವರಿಸಿ ತಿಳಿಸಿದರು. "ಆದ್ದರಿಂದಲೆ ಯಾವುದನ್ನು ವಿಜ್ಞಾನಿಗಳು ಕಾಣಲಾರರೊ ಕೇಳಲಾರರೊ ಅದನ್ನು ಯೋಗಿಗಳು ಕಾಣಬಲ್ಲರು, ಕೇಳಬಲ್ಲರು. "It is very difficult for the ordinary mind to think that God is seeable. Our privilege was to come in contact with a man who saw and talked with God" (ದೇವರನ್ನು ಕಾಣಬಹುದು ಎಂದು ಕಲ್ಪಿಸಿಕೊಳ್ಳುವುದು ಸಾಮಾನ್ಯರಿಗೆ ಬಹಳ ಕಷ್ಟ. ದೇವರನ್ನು ಕಂಡು, ಅವನೊಂದಿಗೆ ಮಾತನಾಡಿದ ವ್ಯಕ್ತಿಯ ಪರಿಚಯವಾಗಿರುವುದು ನಮ್ಮ ಸೌಭಾಗ್ಯ) ಎಂದೆಲ್ಲ ನುಡಿದರು.

ತರುವಾಯ ಸ್ವಾಮಿಜಿ, "ಮಹಾಶಯ, ನಾವು ಇಷ್ಟೆಲ್ಲ ಪ್ರಯತ್ನಪಟ್ಟರೂ ನಮಗೆ ಇನ್ನೂ ದಿವ್ಯಾನುಭವವಾಗಲಿಲ್ಲ" ಎಂದರು.

ಅದಕ್ಕೆ ಅವರು "ಛೇ, ಹಾಗೆನ್ನಬಾರದು. ಗುರುದೇವನು ನಿಮ್ಮ ಮೇಲೆ ಕೃಪಾವರ್ಷವನ್ನೆ ಕರೆದಿದ್ದಾನೆ. ಅದು ನಿಮಗೆ ತಿಳಿಯದೆ. ನಾವೀಗ ವಾಯುಮಂಡಲದ ಭಾರವನ್ನನ್ನು ಹೊತ್ತುಕೊಂಡಿದ್ದೇವೆ. ಆದರೆ ಆ ಭಾರದ ಅನುಭವವು ನಮಗೆ ಆಗುತ್ತಿದೆಯೆ? ಹಾಗೆಯೆ

ನೀವು ಆತ್ಮಜ್ಯೋತಿಯ ಕಡಲಿನಲ್ಲಿ ಮಗ್ನವಾಗಿರುವುದರಿಂದ ಒಂದು ತರದ ಕತ್ತಲೆಯೆ ಕವಿದುಕೊಂಡಂತೆ ಭಾಸವಾಗುತ್ತಿದೆ. ಅಂದಮಾತ್ರಕ್ಕೆ ಅದಿಲ್ಲ ಎನ್ನಬಾರದು" ಎಂದರು.

ಆಮೇಲೆ ಅವರ 'ಕಥಾಮೃತ'ವೆ ನಮ್ಮನ್ನೆಲ್ಲ ಗುರುಮಹಾರಾಜರ ಬಳಿಗೆ ತಂದಿತು ಎಂದೆವು. ಆಗ ಅವರು ಭಕ್ತ, ಭಾಗವತ ಮತ್ತು ಭಗವಾನ್ ಈ ಮೂರೂ ಒಂದೇ ಎಂಬ ತತ್ತ್ವವನ್ನು ವಿವರಿಸಿದರು. ರೊಮಾ ರೋಲಾ ಅವರ (Romain Rolland) ಪ್ರಸ್ತಾಪ ಬಂದಿತು. ಶ್ಲಾಘಿಸಿದರು. "Avatar makes history and history prepares the ground for the advent of the Avatar" (ಅವತಾರ ಇತಿಹಾಸವನ್ನು ಸೃಷ್ಟಿಸುತ್ತಾನೆ; ಇತಿಹಾಸವು ಅವತಾರದ ಆಗಮನಕ್ಕೆ ಸಿದ್ಧತೆಯನ್ನು ಮಾಡುತ್ತದೆ) ಎಂದರು. ಮತ್ತೆ "Don't scatter pearls before swine" (ಹಂದಿಯ ಮುಂದೆ ಮುತ್ತುಗಳನ್ನು ಹರಡಬೇಡ) ಎಂದೂ ಸೇರಿಸಿದರು. ಅಷ್ಟುಹೊತ್ತಿಗೆ ಸ್ವಾಮಿ ರಾಘವಾನಂದರು ಬಂದರು. ಮಾಸ್ಟರ್ ಮಹಾಶಯರು ಬಹು ದೊಡ್ಡ ವ್ಯಕ್ತಿ. ಆದರೂ ತುಂಬ ಸರಳ ಸ್ವಭಾವದವರು. ಹೊರಡುವಾಗ ನಾವು ಕಾಲು ಮುಟ್ಟಿ ನಮಸ್ಕರಿಸಲು "ಬೇಡ! ಬೇಡ!" ಎಂದು ತಡೆದು ಹಸ್ತ ಲಾಘವ ವಿತ್ತು ಕಳಿಸಿದರು. ಅಲ್ಲಿಂದ ಹೊರಟು ಅದ್ವೈತಾಶ್ರಮಕ್ಕೆ ಬಂದೆವು.

**೧೦-೧೦-೧೯೨೯: ಗುರುವಾರ**

ಸ್ವಾಮಿ ಅಭೇದಾನಂದರನ್ನು ನೋಡಲು ಹೋದೆವು. ಮಹಡಿ ಏರಿ ದೇವರ ಕೋಣೆಗೆ ಹೋಗಿ ಗುರುಮಹಾರಾಜರಿಗೆ ನಮಸ್ಕಾರ ಮಾಡಿದೆವು. ದೇವರ ಮನೆಯಲ್ಲಿ ಆಸ್ಟ್ರಿಯಾ ದೇಶದ ಚಿತ್ರಕಾರನೊಬ್ಬನು 'ದರ್ಶನ'ದಲ್ಲಿ ಕಂಡು ಬರೆದ ಶ್ರೀಗುರುದೇವನ ಚಿತ್ರವೂ ಇದೆ ಮತ್ತು ಆತನೆಯೆ ಬರೆದ ಮಹಾಮಾತೆಯವರ ಅತ್ಯಂತ ಮನೋರಂಜಕವಾದ ಬಣ್ಣದ ಚಿತ್ರವೂ ಅಲ್ಲಿದೆ. ಅದನ್ನು ನೋಡಿ "ಎನಿತು ಚೆಲುವೆ ಎನ್ನ ತಾಯಿ ಎಂಬ ನಿಜವನಿಂದು ತಿಳಿದೆ" ಎಂದುಕೊಂಡೆನು. ಸುತ್ತಲೂ ಅಭೇದಾನಂದ ಸ್ವಾಮಿಗಳ ಚಿತ್ರಪಟಗಳಿದ್ದುವು. ದುರ್ಗಾಪೂಜೆ ನಡೆಯುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ ಅವರ ಕೊಠಡಿಗೆ ಹೋಗಿ ಸ್ವಾಮಿ ಅಭೇದಾನಂದರನ್ನು ಕಂಡೆವು. ನೋಡಿದ ಕೂಡಲೆ ಅವರು ತುಂಬಾ ರಾಜಸಿಕ ಶಕ್ತಿವಂತರೆಂದು ಅವರ ಮೈಕಟ್ಟು ಮುಖಭಾವಗಳಿಂದ ತಿಳಿದು ಬರುವುದು. ತುಂಬಾ ಮೇಧಾವಿಗಳು... ವಿಜ್ಞಾನ, ಅಧ್ಯಾತ್ಮಗಳ ವಿಚಾರವಾಗಿ ಸ್ವಲ್ಪ ಮಾತಾಡಿದರು. ಅವರು ತೀವ್ರ ಅದ್ವೈತವಾದಿಗಳು. ವಾದದಲ್ಲಿ, ತರ್ಕದಲ್ಲಿ ಅತ್ಯಾಸಕ್ತಿಯುಳ್ಳವರು. ತುಂಬಾ ರಾಜಸಿಕ ಓಜಸ್ವಿಗಳು. "ಇಂಥವರೇ ಪಶ್ಚಿಮ ದೇಶಗಳಿಗೆ ತಕ್ಕವರು" ಎಂದುಕೊಂಡೆ. ಅವರ ಫೋಟೊ (ಬೈತಲೆ ತೆಗೆದದ್ದು) ಒಂದನ್ನು ಕೊಂಡು ಅವರ ರುಜು ಹಾಕಿಸಿಕೊಂಡೆವು. ಪ್ರಸಾದ ಕೊಟ್ಟರು. ಹರಚೈತನ್ಯ ಎಂಬ ಬ್ರಹ್ಮಚಾರಿಗಳು ನಮಗೆಲ್ಲವನ್ನೂ ತೋರಿಸಿ ಬೀಳ್ಕೊಟ್ಟರು.

**೧೧-೧೦-೧೯೨೯: ಶುಕ್ರವಾರ**

ಪ್ರಾತಃಕಾಲ ಗಂಗೆಯ ಮೇಲಿನ ಸೂರ್ಯೋದಯ:
"ಎನಿತು ಚೆಲುವು ಈ ದಿನಮಣಿಯುದಯ?



ಆಸ್ಟ್ರಿಯಾ ದೇಶದ ಕಲೆಗಾರ ಬರೆದ ಚಿತ್ರ

ಮಿರುಗುತಲಿದೆ ಈ ಗಂಗೆಯ ಹೃದಯ!"

ಪುನಃ ದೇವಿಯ ಪೂಜೆಯಾಯಿತು. ಅನೇಕ ಭಕ್ತರು ನೆರೆದಿದ್ದರು. ಕುಮಾರಿ ಪೂಜೆಯಾಯಿತು. ಹೆಣ್ಣುಮಗುವೊಂದನ್ನು ಪೂಜಿಸಿದರು. ಮಹಾಪುರುಷಜಿಗೆ ಅಡ್ಡಬಿದ್ದೆವು. ನಮ್ಮ ಟೀ ವಿಚಾರವಾಗಿ ಅವರಿಗೆ ಎಷ್ಟು ಮುತುವರ್ಜಿ! ಇವರಲ್ಲವೆ ಮಹಾಪುರುಷ?

ಸಾಯಂಕಾಲ ತಾಯಿಯ ಪೂಜೆ. ಮದ್ದಳೆಗಳ ಸದ್ದು ಭೈರವ ಮೋಹಕವಾಗಿತ್ತು. ಸಾವಿರಾರು ಭಕ್ತರು ನೆರೆದಿದ್ದರು.

**೧೨-೧೦-೧೯೨೯ : ಶನಿವಾರ**

ಗಂಗೆಯ ಮೇಲಣ ಸೂರ್ಯೋದಯ ಅತ್ಯಂತ ರಮಣೀಯ : ಉದ್ದಾಮ ಹೇಮಜ್ಯೋತಿ.

ಮಹಾಪುರುಷಜಿಯ ದರ್ಶನ ಮಾಡಿ ನಮಸ್ಕರಿಸಿದೆವು. ನಮ್ಮ ಯೋಗಕ್ಷೇಮವನ್ನು ವಿಚಾರಿಸಿದರು. ನಮಗೆ ಬಂಗಾಳಿ ಅಡುಗೆ ಹಿಡಿಸುತ್ತದೆಯೋ ಇಲ್ಲವೋ ಎಂದು ಕಾತರರಾಗಿ ಸ್ವಾಮಿ ಸಿದ್ದೇಶ್ವರಾನಂದರಿಗೆ ಆ ವಿಚಾರವಾಗಿ ಸಲಹೆ ಇತ್ತರು. ದೇವಿ ಚಾಮುಂಡಿ ಮೈಸೂರಿಗೆ ಕೃಪಾಕರೆಯಾಗಿದ್ದಾಳೆ ಎಂದರು. ನಾವು ಅರ್ಪಿಸಿದ ಚಾಮುಂಡಿಯ ವಿಗ್ರಹ ತಾಯಿಯೆ ಕಳುಹಿಸಿದ್ದು ಎಂದು ಹೇಳಿದರು. ಅವರಿಗೆ ಪರಮಾನಂದ!

ಅಲ್ಲಿಂದ ಸುಮಾರು ಏಳೂವರೆ ಗಂಟೆಗೆ ದೋಣಿಯವನೊಡನೆ ಚೌಕಾಸಿ ಮಾಡಿ ದೋಣಿ ಹತ್ತಿ ದಕ್ಷಿಣೇಶ್ವರಕ್ಕೆ ಹೊರಟೆವು.... ಗುರುಮಹಾರಾಜರ ಪಂಚವಟಿ, ತಪಸ್ಸು ಮಾಡಿದ ಆದಿ ಪಂಚವಟಿ. ಗುಡಿಸಲಿದ್ದ ಜಾಗದಲ್ಲಿ ಮನೆಯಿದೆ. ಭಕ್ತರು ಇಟ್ಟಿಗೆಗಳನ್ನೆ ಕಳಚಿ ಹೊತ್ತರೆ ಮುಂದೆ ಗತಿಯೇನು? (ಪವಿತ್ರ ಸ್ಮಾರಕಗಳೆಂದು ಕೆಲವನ್ನು ಆಗಲೆ ಕಳಚಿಕೊಂಡಿದ್ದರು). ವೇದಿಕೆಯ ಮೇಲೆ ಸಿಮೆಂಟು ಹಾಕಿ ಗುರುಮಹಾರಾಜರು ಕುಳಿತು ತಪಸ್ಸು ಮಾಡುತ್ತಿದ್ದ ಸ್ಥಳವನ್ನು ಗುರುತಿಸಿದ್ದಾರೆ.

ಪಂಚವಟಿಯ ಸುತ್ತಲೂ ಕಣಿಗಿಲೆ, ಈಚಲು, ತೆಂಗು, ಅಡಕೆ.

ಪೂರ್ವ ದಿಕ್ಕಿನಲ್ಲಿ ಕೊಳವಿದೆ. ರಸಿಕನಿಗೆ (ಕಸಗುಡಿಸಿ ಕಕ್ಕಸ್ಸು ತೊಳೆಯುತ್ತಿದ್ದ ದಕ್ಷಿಣೇಶ್ವರದ ಜಲಗಾರ) ಅಭಯಪ್ರದಾನ ಮಾಡಿದ ಸ್ಥಳ! ಗೋವುಗಳು ಅಲ್ಲಲ್ಲಿ ಮೇಯುತ್ತಿವೆ. ಹಕ್ಕಿಗಳು ಮರಗಳಲ್ಲಿ ಕೂಗುತ್ತಿವೆ. ವೃದ್ಧ ವೃಕ್ಷ. ಕೆಸುವಿನ ಗಿಡಗಳು, ಗಾಳಿಯ ಮರಗಳು, ಎರಡು ದೊಡ್ಡ ಮರ. ಕೊಳದ ಚಿತ್ರವನ್ನು ಫೋಟೊ ತೆಗೆದೆವು. ನಾನು, ಸ್ವಾಮಿಜಿ ಎದುರು ದಡದಲ್ಲಿ ನಿಂತೆವು. ಎನಿತು ಶಾಂತಿ ಈ ತಣ್ಣೊಳದಲ್ಲಿ! ನಿಬಿಡ ಕಿಸಲಯಗಳು. ಮೇಯುವ ಆಡುಗಳು.

ಮಥುರಬಾಬುವಿನ ಕುದುರೆಯ ಲಾಯ. ಮೇಲೆಲ್ಲ ಹುಲ್ಲು ಗಿಡ ಹಳು ಬೆಳೆದು ನಿಂತಿದೆ.

ತಾಂತ್ರಿಕ ಸಾಧನೆ ಮಾಡಿದ ಬಿಲ್ವವೃಕ್ಷಕ್ಕೆ ಸುತ್ತಲೂ ಬೇಲಿ ಹಾಕಿದ್ದಾರೆ. ಪಕ್ಕದಲ್ಲಿ ಕಾರ್ಖಾನೆಗಳನ್ನು ಕಟ್ಟಿ ಶಾಂತಿಯನ್ನೆ ಕೆಡಿಸಿದ್ದಾರೆ. ಬಿಲ್ವದ ಮರದಲ್ಲಿ ಎಷ್ಟು ದೊಡ್ಡ ಕಾಯಿಗಳು ನೇತಾಡುತ್ತಿವೆ! (ಇಲ್ಲಿಗೆ ಫೋಟೊ ತೆಗೆಯುವ ಹುಮ್ಮಸ್ಸೇ ಹೋಯಿತು. ತಪ್ಪು ಫಿಲ್ಮ್ ತಂದುಬಿಟ್ಟಿದ್ದಾರೆ. ಅಯ್ಯೋ ದೇವರೆ!) ನೆಲದ ತುಂಬ ಹುಲ್ಲು, ಗಿಡ ಬೆಳೆದುಕೊಂಡಿವೆ. ಯಾವುದನ್ನೂ ನಿರ್ಮಲವಾಗಿ ಇಟ್ಟಿಲ್ಲ.

ಗುರುಮಹಾರಾಜರು ನೆಟ್ಟು ಬೆಳೆಸಿದ ಪಂಚವಟಿಯಲ್ಲಿ ಭಸ್ಮ ಧಾರಿಯಾದ ಸಂನ್ಯಾಸಿಯೊಬ್ಬನು ಕುಳಿತಿದ್ದಾನೆ. ಈ ಸ್ಥಳದಿಂದಲೆ ಗುರುದೇವನು ಗಂಗೆಯಲ್ಲಿ ತೇಲುತ್ತಿದ್ದ ಮಹಾಕಮಲವನ್ನೂ ಅದರ ಮೇಲೆ ನಿಂತಿದ್ದ ಶ್ರೀಕೃಷ್ಣನನ್ನೂ ಅವನ ಜೊತೆಯಲ್ಲಿದ್ದ ಬ್ರಹ್ಮಾನಂದ ಸ್ವಾಮಿಗಳನ್ನೂ (ಕೃಷ್ಣನ ಸಂಗಾತಿ ರಾಖಾಲ್) ನೋಡಿದ್ದಂತೆ!

ಶ್ರೀರಾಮಕೃಷ್ಣದೇವರ ಶಾಂತಿಕುಟೀರ. ಶಿವ, ಗುರುದೇವ, ಮಹಾಮಾತೆ. ನಹಬತ್‌ಖಾನೆಯಲ್ಲಿ ಮಹಾಮಾತೆ ಸಂಸಾರ ಮಾಡಿದ್ದು. ಮಥುರಬಾಬುವಿನ ಅರಮನೆಯ ಕೋಣೆಯೊಂದರಲ್ಲಿ ಗುರುದೇವನು ಮೊದಲು ಇದ್ದದ್ದು. ಆ ಕೋಣೆಯ ಮುಂಭಾಗದ ಮೆಟ್ಟಲಿನ ಮೇಲೆ ನಾನು, ಮಾನಪ್ಪ ನಿಂತೆವು. ಸ್ವಾಮಿಜಿ ಮುಖ ತೊಳೆಯಲು ಘಟ್ಟವಿಳಿದು ಹೋದರು. ಎದುರು ಗಂಗಾ ವಿಸ್ತಾರ ವಕ್ಷ. ಎರಡು ದೊಡ್ಡ ಮನೆಗಳು. ಏನು ಮೋಟಾರು ಶಬ್ದ! (ದಕ್ಷಿಣೇಶ್ವರ ಆಗಲೆ ವಾಹನಸಂಚಾರದ ಗಡಿಬಿಡಿಗೆ ಒಳ ಗಾಗಿತ್ತು).

ಅಲ್ಲಿಂದ ಮುಂದೆ ನಡೆದು ಗುರುದೇವನ ಕೋಣೆಯ ಮುಂದೆ ನಿಂತೆವು. ಅದಕ್ಕೆ ಬೀಗ ಹಾಕಿತ್ತು. ಸ್ವಾಮಿಜಿ ಬೀಗದಕೈ ತರಲು ಹೋದರು. ಶ್ರೀಗುರು ಒಳಗಿನಿಂದ ಮೂರ್ತಿಮತ್ತಾಗಿ ಕರೆಯು ವಂತಾಯಿತು. ಎಂತಹ ಪೂತ ಸನ್ನಿವೇಶ!

ಬಾಗಿಲು ಬೀಗ ತೆಗೆದು ನಾವೆಲ್ಲ ಒಳಗೆ ಹೋದೆವು. ಗುರು ಮಹಾರಾಜರ ಕೊಠಡಿ ಸುಮಾರು ಹದಿನೈದು ಮೂವತ್ತು ಅಡಿ ಉದ್ದಗಲವಿದ್ದು, ಪೂರ್ವಕ್ಕೊಂದು ಪಶ್ಚಿಮಕ್ಕೊಂದು ಬಾಗಿಲುಗಳು. ಪಶ್ಚಿಮದ್ವಾರದ ಮುಂಭಾಗದ ಚಾವಡಿಯಿಂದ ಗಂಗಾದರ್ಶನ. ಮೂಲೆಯಲ್ಲಿ ಒಂದು ದೊಡ್ಡ ನೀರಿನ ಹರಿವೆ ಇದೆ. ಅದರಲ್ಲಿ ಶ್ರೀಗುರು ತಮ್ಮ ಉಪಯೋಗಕ್ಕೆ ನೀರು ತುಂಬಿ ಇಟ್ಟುಕೊಳ್ಳು ತ್ತಿದ್ದರಂತೆ. ಅಂದಿನಿಂದಲೂ ಅದಕ್ಕೆ ನೀರು ತುಂಬುತ್ತಿದ್ದು ಅದು ಎಂದೂ ಖಾಲಿಯಾಗದಂತೆ ನೋಡಿಕೊಂಡಿದ್ದರಿಂದ ಇಂದಿಗೂ ಅದರಲ್ಲಿ ಗುರುಮಹಾರಾಜರು ಉಪಯೋಗಿಸಿದ್ದ ನೀರಿನ ಅಂಶವಿರುವುದರಿಂದ ಅದು ಪವಿತ್ರ ವಸ್ತುವಾಗಿ ಭಕ್ತರಿಗೆ ತೀರ್ಥ ಒದಗಿಸುತ್ತದೆ. ಎರಡು ಮಂಚಗಳಿವೆ. ಬುದ್ಧನ ವಿಗ್ರಹ ಗೂಡಿನಲ್ಲಿದೆ. ಚೈತನ್ಯದೇವನ ಸಮಾಧಿಸ್ಥ ಚಿತ್ರವಿದೆ. ಮಥುರ ಬಾಬುವಿನ ಒಂದು ದೊಡ್ಡದಾದ ತೈಲವರ್ಣಚಿತ್ರವೂ ಇದೆ. ಗುರು ಮಹಾರಾಜರದ್ದೂ ಒಂದು ದೊಡ್ಡ ಚಿತ್ರವಿದೆ. ಆ ಚಿತ್ರದಲ್ಲಿ ಅವರು ಹಣೆಯಲ್ಲಿ ಗಂಧದ ಬಟ್ಟುಗಳನ್ನಿಟ್ಟಿದ್ದಾರೆ. ಕಬ್ಬಿಣದ ಸರಳುಗಳಿಂದ ಭದ್ರಪಡಿಸಲ್ಪಟ್ಟ ಬಾಗಿಲೊಂದು ಪೂರ್ವಕ್ಕಿದೆ.

"*ಆದ್ಯ ಹೊಯಿತೆ ಸ್ವಾಮಿ ವಾಕ್ಯೇ ಸೇವ್ಯಸೇವಕ ಭಾವ್ ಪ್ರಾಪ್ತ ಹೊಯಿಲೊ.*" (ಇಂದಿನಿಂದ ಸ್ವಾಮಿಗಳ ನುಡಿಯಂತೆ ಸೇವ್ಯ ಸೇವಕ ಭಾವವು ಪ್ರಾಪ್ತವಾಯಿತು) ಶ್ರೀರಾಮಚಂದ್ರ ಬ್ರಹ್ಮಚಾರಿ ಗುರು ಮಹಾರಾಜ್ ಅವರಿಗೆ 'ಸೋಹಂ' ಎನ್ನಬೇಡ ಎಂದು ಹೇಳಿದಾಗ ಬರೆದಿದ್ದಂತೆ, ಗೋಡೆಯ ಮೇಲೆ.

ಕೋಣೆಯಲ್ಲಿರುವ ಇತರ ವಿಗ್ರಹಗಳು ಮತ್ತು ಚಿತ್ರಗಳು : ಯೇಸುಕ್ರಿಸ್ತನ ಚಿತ್ರ, ರಾಧಾ-ಕೃಷ್ಣರ ಚಿತ್ರ, ರಾಮಚಂದ್ರ ದತ್ತನ ಚಿತ್ರ, ಪಾರ್ಶ್ವನಾಥ ವಿಗ್ರಹ, ಜಗನ್ನಾಥನ ವಿಗ್ರಹಗಳು, ಗಣೇಶನ ವಿಗ್ರಹ, ಧ್ರುವನ ಚಿತ್ರ, ನೃತ್ಯಭಂಗಿಯಲ್ಲಿ ಚೈತನ್ಯನ ಚಿತ್ರ.

ಗೋಡೆಯ ಮೇಲೆ ಶ್ರೀಗುರುದೇವನೆ ಸ್ವಹಸ್ತದಿಂದಲೆ ಇದ್ದಲಿ ನಲ್ಲಿ ಗೆರೆಗೆರೆಯ ಒಂದು ಚಿತ್ರ ಬರೆದಿದ್ದಾರೆ. ಮಕ್ಕಳು ಮುದ್ದು ಮುದ್ದಾಗಿ ಬರೆದಂತೆ ಇದೆ. ಒಂದು ಹೂವಿನ ಗಿಡದ ಮೇಲೆ ಒಂದು ಹಕ್ಕಿ ಕೂತಂತೆಯೊ ಕೂರುತ್ತಿರುವಂತೆಯೊ ಕಾಣುತ್ತದೆ. ನಾನು ಅದನ್ನು ನನ್ನ ದಿನಚರಿ ಪುಸ್ತಕದಲ್ಲಿ ಪೆನ್ಸಿಲ್ಲಿನಿಂದ ಪ್ರತಿ ಎತ್ತಿಕೊಂಡಿದ್ದೇನೆ. ಅದನ್ನು ಮುಂದಿನ ಪುಟದಲ್ಲಿ ಪ್ರತಿಮಾಡಲು ಪ್ರಯತ್ನಿಸುತ್ತೇನೆ ***(ಕುವೆಂಪು ಬರೆದ ಚಿತ್ರವನ್ನು ವಿವೇಕಪ್ರಭದ ಜನವರಿ ೨೦೦೫ ಸಂಚಿಕೆಯ ಪುಟ ೧೯ರಲ್ಲಿ ಮುದ್ರಿಸಲಾಗಿದೆ)*.**

ಅಲ್ಲಿಂದ ರಾಧಾಗೋವಿಂದ ದೇವಸ್ಥಾನಕ್ಕೆ ಹೋದೆವು. ರಾಧಾ ಗೋವಿಂದನ ವಿಗ್ರಹ ನಿರ್ಮಲ ಶುಭ್ರವಾದ ಅಮೃತಶಿಲೆಯ ವೇದಿಕೆಯ ಮೇಲಿದೆ. ನಮಸ್ಕಾರಾದಿಗಳನ್ನು ಮುಗಿಸಿ, ಕಾಳಿಕಾ ಗುಡಿಗೆ ಭವತಾರಿಣಿಯ ಸನ್ನಿಧಿಗೆ ಹೋದೆವು. ನಮಗೆ ಕಲ್ಲು ಮಾತ್ರವಾಗಿರುವ ಯಾವ ವಿಗ್ರಹದಲ್ಲಿ ಶ್ರೀಗುರು ಸಾಕ್ಷಾತ್ ಜಗನ್ಮಾತೆ ಭವತಾರಿಣಿಯನ್ನು ಪ್ರತ್ಯಕ್ಷ ದರ್ಶಿಸಿದರೋ ಆ ಭವ ತಾರಿಣಿಯ ಸನ್ನಿಧಿಗೆ ಹೋಗಿ, ನಿಂತು, ಹಳೆಯದನ್ನೆಲ್ಲ ನೆನೆದು ಪೂಜಿಸಿದೆವು. ಹೂವುಗಳನ್ನು ಕೊಂಡು ಅರ್ಪಿಸಿದೆವು. ಪ್ರಸಾದ ಪಡೆ ದೆವು. ನಮಸ್ಕರಿಸಿ, ನಾಟ್ಯಮಂದಿರದ ಮಾರ್ಗವಾಗಿ ಬಲಿಪೀಠದ ಬಳಿಯಿಂದ ಹೋಗಿ ಶಿವದೇವಾಲಯಗಳನ್ನು ನೋಡಿದೆವು. ಶ್ಯಾಮಸುಂದರ ಶಿಲಾ ಲಿಂಗಗಳವು! ಅಲ್ಲಿ ತೀರ್ಥ ತೆಗೆದು ಕೊಂಡೆವು (ದಿನಚರಿಯಲ್ಲಿ 'ನೀರು ಕುಡಿದೆವು' ಎಂದು ಬರೆದಿ ದ್ದೇನೆ!). ರಾಮಲಾಲ ದಾದ ಪುನಃ ನಮ್ಮ ಜೊತೆಯಲ್ಲಿ ಬೇಲೂರು ಮಠಕ್ಕೆ ಬರಬಹುದು ಎಂದು ಅವರನ್ನು ಹುಡುಕಿದೆವು, ಸಿಕ್ಕಲಿಲ್ಲ. ಹೋಟೆಲಿನಲ್ಲಿ ತಿಂಡಿ ತಿಂದು ಎಳನೀರು ಕುಡಿದೆವು.

ದೋಣಿಗೆ ಬಂದು ಕುಳಿತೆವು. ದೋಣಿಯವನು ತಡ ಮಾಡಿದನು.

ಇನ್ನೇನು ಹೊರಡುವುದರಲ್ಲಿದ್ದೆವು. ಅಷ್ಟರಲ್ಲಿ ಸ್ನಾನಘಟ್ಟದಲ್ಲಿ ಮುಳುಗೇಳುತ್ತಿದ್ದ ರಾಮಲಾಲ ದಾದರನ್ನು ಕಂಡೆವು. ವೃದ್ಧ ದೇಹದ ಲಘು ಅಂಗದ ಆತನು ಬಿಸಿಲಿನಲ್ಲಿ ಸ್ನಾನಮಾಡುತ್ತಿದ್ದುದು ಪವಿತ್ರವಾಗಿ ಕಂಡಿತು. ರಾಮಲಾಲ ಚಾಟರ್ಜಿಯ ತಮ್ಮನ ಮಗ ನಕುಲ ಚಾಟರ್ಜಿಯು ನಮ್ಮೊಡನೆ ಬೇಲೂರಿಗೆ ಬಂದನು.

೧೩-೧೦-೧೯೨೯ : ಭಾನುವಾರ

ದಿನಚರಿ ಪ್ರಾರಂಭವಾಗುತ್ತದೆ, "ಕಾಳಿ ಬರುವಳು!" ಎಂಬ ಕವನದಿಂದ. ದುರ್ಗಾ ಪೂಜೆಯ ಪ್ರಭಾವಸ್ಫೂರ್ತಿಯಿಂದ ಹೊಮ್ಮಿದೆ ಆ ವೀರಕವನ!...

ಬೆಳಿಗ್ಗೆ ಮಹಾಪುರುಷಜಿಗೆ ನಮಸ್ಕರಿಸಿ ನಿಂತೆವು. ಅವರೆದುರಿಗೆ ಹೋದಾಗಲೆಲ್ಲಾ ಏನೊ ಒಂದು ಭಕ್ತಿ ವಾತ್ಸಲ್ಯಗಳ ಪರಸ್ಪರ ಸಮ್ಮೇಲನದ ಅನುಭವವಾಗುತ್ತದೆ. ಅವರ ಮುಗುಳುನಗೆಯ ಮಾಧುರ್ಯವೇನು! ಗಾಂಭೀರ್ಯವೇನು! ಗಂಭೀರ ಅರ್ಥವೇನು!..... ಸಾಯಂಕಾಲ ತಾಯಿಯನ್ನು ಮನೆಗೆ ಕಳಿಸುವ ಉತ್ಸವ. ಬಹಳ ವೈಭವ ಕೋಲಾಹಲಗಳಿಂದ ಕೂಡಿತ್ತು. ವಿಗ್ರಹವನ್ನು ಪೀಠದಿಂದ ಸ್ವಲ್ಪ ದೂರ ಹೊತ್ತುಕೊಂಡು ಬಂದು, ಅದಕ್ಕೆ ತವರುಮನೆಗೆ ಹೋಗುವ ಹೆಣ್ಣಿಗೆ ಮಾಡುವ ಉಪಚಾರದ ಕರ್ಮ ಕ್ರಿಯೆಗಳನ್ನೆಲ್ಲ ಮಾಡುವರು. ಕೆನ್ನೆ ಮುಟ್ಟಿ ಮುದ್ದು ಮಾಡುವರು. "ಹೋಗಿ ಬರ್ತೀಯಾ?" ಎಂದು ಕೇಳುವರು. ಹೂವು ಮುಡಿಸುವರು. ಅಕ್ಷತೆ ಎರಚುವರು. ಮಂಗಳಾರತಿ ಎತ್ತುವರು. ಮತಾಪು ಮೊದಲಾದುವುಗಳನ್ನು ಅವಳ ಮುಂದೆ ಸುಡುವರು. ಎಲ್ಲರೂ ಕಡೆಗೆ ಒಬ್ಬೊಬ್ಬರಾಗಿ ಹೋಗಿ ಆಕೆಯ ಪಾದಗಳನ್ನು ಮುಟ್ಟಿ ಶರಣು ಮಾಡುವರು. ತರುವಾಯ ಅದನ್ನು ಗಂಗೆಗೆ ಹೊತ್ತುಕೊಂಡು ಒಯ್ದರು. ಮಾತೆಯ ಮುಖ ಮಠಕ್ಕೆ ಅಭಿಮುಖವಾಗಿಯೆ ಇತ್ತು: ಏಕೆಂದರೆ, ಮುಂದಿನ ವರುಷ ಮರಳಿ ಬಾ ಎಂಬ ಸೂಚನೆಯಂತೆ! ಮಹಾಪುರುಷಜಿ ಉಪ್ಪರಿಗೆಯ ವರಾಂಡದಲ್ಲಿ ಬಂದು ಕುಳಿತರು (ಹಿಂದೆಲ್ಲ ಮಾಡುತ್ತಿದ್ದಂತೆ ಕೆಳಗಿಳಿದು ಬಂದು ತಾಯಿಯನ್ನು ಕಳುಹಿಸಿಕೊಡುವಂತಹ ದೇಹಶಕ್ತಿ ಅವರಿಗೆ ಇರಲಿಲ್ಲ. ಅವರ ಆರೋಗ್ಯ ಬಹಳ ಸೂಕ್ಷ್ಮಸ್ಥಿತಿಯಲ್ಲಿತ್ತು). ತಾಯಿಯ ಮುಂದೆ ನೃತ್ಯವಾಯಿತು. .....ತರುವಾಯ ಗಂಗಾಜಲದಲ್ಲಿ ಮೂರ್ತಿ ವಿಸರ್ಜನವಾಯಿತು.

ಶಾಂತಿಜಲವನ್ನು ತಂದು ಪೀಠದ ಮೇಲಿಟ್ಟು, ಬ್ರಹ್ಮಚಾರಿಯೊಬ್ಬನಿಂದ ಮಂತ್ರಗಳನ್ನು ಹೇಳಿಸಿ, ನೀರನ್ನು ನೆರೆದಿದ್ದವರ ಮೇಲೆ "ಓಂ ಶಾಂತಿಃ ಶಾಂತಿಃ ಶಾಂತಿಃ!" ಎಂದು ಹೇಳುತ್ತಾ ಎರಚಿದರು. ತರುವಾಯ "ಸಮರೇ ನಾಚೇ ಕಾರೇ ರಮಣಿ?" ಮೊದಲಾದ ರಾಮಪ್ರಸಾದ. ಕಮಲಾಕಾಂತರ ವೀರರಸ ಪ್ರಧಾನವಾದ ಗೀತಗಳನ್ನು ಹಾಡಿದರು.

ಬೇಲೂರು ಮಠದಂತೆಯೆ ಇತರ ಸಾವಿರಾರು ಕಡೆಗಳಲ್ಲಿ, ಗಂಗೆಯ ಎರಡು ದಡಗಳಲ್ಲಿಯೂ, ಆ ರಾತ್ರಿಯೆ, ತಾಯಿಯನ್ನು ತವರಿಗೆ ಕಳಿಸುವ ವಿಸರ್ಜನೋತ್ಸವ ಸಮಾರಂಭ. ಆದ್ದರಿಂದಲೇ ಗಂಗಾನದಿಯ ಇಕ್ಕೆಲಗಳೂ ವಾದ್ಯ, ಜಾಗಟೆ, ಶಂಖ, ಘಂಟೆ, ಸಾವಿರಾರು ದೀಪಕಾಂತಿ, ಜನಗಳ ಕೂಗು, ಕದನಿ ಮೊದಲಾದ ಮದ್ದು ಗುಂಡುಗಳ ಆರ್ಭಟೆ ಇತ್ಯಾದಿ ನಾದ ಕಾಂತಿಗಳಿಂದ ತುಂಬಿ ಹೋಗಿದ್ದುವು. ತೇಲುವ ದೋಣಿಗಳೂ ಗಂಗೆಯ ವಕ್ಷದಲ್ಲಿ ಜ್ಯೋತಿರ್ಗವಾಕ್ಷಗಳು ದಟ್ಟೈಯಿಸಿದಂತಿದ್ದುವು. ಇಂಪಾದ ವಾದ್ಯಧ್ವನಿ ವಾಯುಮಂಡಲವನ್ನೆಲ್ಲ ತುಂಬಿ ಗಂಗೆಯ ತರಂಗಗಳ ಮೇಲೆ ತೇಲಿ ಬಂದು ಸ್ವರ್ಗ, ಮರ್ತ್ಯ, ವೈಕುಂಠಗಳನ್ನು ಪ್ರವೇಶಿಸುವಂತಿತ್ತು.

ಒಬ್ಬೊಬ್ಬರೂ ಬಿಲ್ವಪತ್ರಗಳ ಮೇಲೆ 'ಶ್ರೀದುರ್ಗಾಶರಣಂ' ಎಂದು ಬರೆದು ಶಾಂತಿಜಲದ ಕುಂಭದಲ್ಲಿ ಹಾಕಬೇಕು. ಒಬ್ಬೊಬ್ಬರೂ ಆಕೆಯ ಹೆಸರನ್ನು ನೂರೆಂಟು ಸಾರಿ ಹೇಳಬೇಕು. ಕಿರಿಯವರು ಹಿರಿಯರಿಗೆ ಕಾಲುಮುಟ್ಟಿ ನಮಸ್ಕಾರ ಮಾಡುತ್ತಾರೆ. ಒಬ್ಬರನ್ನೊಬ್ಬರು ಆಲಿಂಗಿಸುತ್ತಾರೆ. ಇದೆಲ್ಲ ಮುಗಿದ ಮೇಲೆ ಊಟ.... ಅಂತೂ ಮನೋಹರವೂ ಆತ್ಮೋದ್ಧಾರಕವೂ ಆದ ರಾತ್ರಿಯಿದು!

೧೪-೧೦-೧೯೨೯ : ಸೋಮವಾರ

ಮಧ್ಯಾಹ್ನ ದೇವರಮನೆಗೆ ಹೋಗಿ ಶ್ರೀಗುರುಮಹಾರಾಜರ ಅಂಗಿ, ಪಾದುಕೆ, ಕೈಬರಹ ಮೊದಲಾದ ಸ್ಮೃತಿವಸ್ತುಗಳನ್ನು ನೋಡಿದೆವು....

ಸಾಯಂಕಾಲ ಎಲ್ಲ ಸ್ವಾಮಿಗಳಿಗೂ ನಮಸ್ಕಾರ ಮಾಡಿ ಮಹಾಪುರುಷಜಿಯ ಬಳಿಗೆ ಹೋದೆವು. ಅವರಿಗೆ ಗೂರಲು ಬಂದಿತ್ತು. ತೊಂದರೆ ಪಡುತ್ತಿದ್ದರು. ಆದರೂ ಅತ್ಯಂತ ಪ್ರಸನ್ನರಾಗಿ ತುಂಬ ಕರುಣೆಯಿಂದ ನಮ್ಮ ಊಟ ಉಪಚಾರಗಳ ವಿಚಾರ ಕೇಳಿದರು ಮತ್ತು ಗುರುಮಹಾರಾಜರು ನಿಮ್ಮ ಬಳಿಯೆ ಸದಾ ಇರುವರು ಎಂದು ಬೊಚ್ಚು ಬಾಯಿಯ ಮುಗುಳ್ನಗೆಯಿಂದ ಆಶೀರ್ವದಿಸಿದರು.

ಗಂಟುಮೂಟೆ ಕಟ್ಟಿಕೊಂಡು ಎಲ್ಲರನ್ನೂ ಬೀಳ್ಕೊಂಡು ಹೌರಾ ಸ್ಟೇಷನ್ನಿಗೆ ಬಂದು ನೂಕುನುಗ್ಗಲಿನಲ್ಲಿ ತುಂಬ ಶ್ರಮ ದಿಂದಲೆ ರೈಲು ಹತ್ತಿದೆವು.....

## ಶಿಷ್ಯ ವಾತ್ಸಲ್ಯ

ಸ್ವಾಮಿ ಅದ್ಭುತಾನಂದರ ಬಾಲ್ಯದ ಹೆಸರು ರಕ್ತುರಾಮ. ಅವರು ತಮ್ಮ ಬಾಲ್ಯದಿಂದಲೇ ಶ್ರೀರಾಮಕೃಷ್ಣರ ಬಳಿ ಇರುವ ಸುಯೋಗವನ್ನು ಹೊಂದಿದ್ದರು. ಭಕ್ತರೊಬ್ಬರು ಒಂದು ಹೊಸ ಜೊತೆ ಜೋಡನ್ನು ರಕ್ತುರಾಮನಿಗೆ ಕೊಟ್ಟರು. ಅವನು ಅದನ್ನು ಒಂದು ದಿನ ಮಾತ್ರ ಹಾಕಿಕೊಂಡು ರಾತ್ರೆ ಕೋಣೆಯ ಹೊರಗೆ ಬಿಟ್ಟಿದ್ದ. ಶ್ರೀರಾಮಕೃಷ್ಣರು ಹೊತ್ತಿಗೆ ಮುಂಚೆ ಎದ್ದು ಬರುವಾಗ ಹೊರಗೆ ನೋಡುತ್ತಾರೆ, ಎರಡು ಜೋಡಿನಲ್ಲಿ ಒಂದು ಮಾತ್ರ ಇದೆ. ಪಾಪ, ಹುಡುಗನಿಗೆ ಹೊಸ ಜೋಡನ್ನು ಒಂದು ದಿನವೂ ಸರಿಯಾಗಿ ಹಾಕಿಕೊಳ್ಳುವ ಯೋಗವಿಲ್ಲವಾಯಿತು; ನಾಯಿಯು ಅದನ್ನು ಹೊತ್ತುಕೊಂಡು ಹೋಗಿ ಎಲ್ಲಿಯೋ ಹಾಕಿರಬೇಕು ಎಂದು ಬೆಳಿಗ್ಗೆ ದಕ್ಷಿಣೇಶ್ವರದಲ್ಲೆಲ್ಲ ಹುಡುಕಾಡುತ್ತಿದ್ದರು. ರಕ್ತುರಾಮ ಹೊರಗೆ ಬಂದು ಶ್ರೀರಾಮಕೃಷ್ಣರು ತಮ್ಮ ಜೋಡನ್ನು ಹುಡುಕುತ್ತಿರುವುದನ್ನು ನೋಡಿ ದಿಗ್ಭ್ರಾಂತನಾದ. ತನ್ನಂತಹ ಪಾಮರನ ಮೆಟ್ಟನ್ನು ಹುಡುಕುತ್ತಿರುವರಲ್ಲಾ ಈ ಮಹಾ ಆಚಾರ್ಯರು ಎಂದು ಕಂಬನಿ ಸುರಿಸಿದ. ಮುಂದೆ ಈ ಒಂದು ಘಟನೆಯನ್ನು ಸ್ವಾಮಿ ಅದ್ಭುತಾನಂದರು ತಮ್ಮ ಶಿಷ್ಯರಿಗೆ ಅನೇಕ ಬಾರಿ ಹೇಳುತ್ತಿದ್ದರು.